**<u>ವ್ಯಾಖ್ಯಾನ</u>**

# <u>ಹರಿ ಚಿತ್ತ ಸತ್ಯ</u>

**Ref.:** Dr. A.B. Shamachar, Haridasa Hrudaya, Srimadhwa Grantha Prakashana, Bengaluru (2016), page No. 63.

ಶ್ರೀ ಜಗನ್ನಾಥ ದಾಸರು 'ಕ್ಲೇಶಾನಂದಗಳೀಶಾಧೀನ' ಎಂದ ಮಾತು ಸತ್ಯವೆಂಬುದನ್ನು ಮತ್ತೊಂದು ರೀತಿಯಿಂದ ಶ್ರೀ ಮೊದಲಕಲ್ ಶೇಷದಾಸರು ತಮ್ಮ ಒಂದು ಉಗಾಭೋಗದಲ್ಲಿ ಹೇಳಿದ್ದು ಹೀಗಿದೆ -

**ಒಂದು ಸ್ಮರಿಸುತಿರೆ ಆನಂದವಾಗುತಿದೆ ಮ-**
**ತ್ತೊಂದು ಸ್ಮರಿಸುತಿರೆ ಕ್ಲೇಶವಹುದೋ**
**ಕುಂದು ಲೇಸುಗಳ ಕಾಲಭೇದದಿಂದ ಸಂ-**
**ಬಂಧಗೈಸಿದೆನಗೆ ಸಾರ್ವಭೌಮ**
**ಇಂದಿರಾಪತಿ ನಿನ್ನ ಸತ್ಯಸಂಕಲ್ಪವ**
**ಮಂದನಾದವ ನಾನು ದಾಟುವನೆ**
**ಅಂದು ಮಾಡಿದ ಕರ್ಮ ಒಂದೊಂದು ಸ್ಮರಿಸುತಿರೆ**
**ತಂದೆ ಎನ್ನಯ ಭಾಗ್ಯಕ್ಕೆಣೆ ಯಾವುದೋ**
**ಇಂದಿನ ದೌರ್ಭಾಗ್ಯ ಎಣಿಸಿ ಗುಣಿಸಿ ನೋಡೆ**
**ಕುಂದಿಗೆ ಸಮ ಉಂಟೆ ವಸುಂಧರೆಯಲಿ**
**ಮಂದರೋದ್ಧಾರ ಗುರುವಿಜಯವಿಟ್ಠಲ ನಿನ್ನ**
**ಪೊಂದಿದವನಿಗಿನಿತು ಫಲವೇನೊ II - ಶ್ರೀಮೊದಲಕಲ್ ಶೇಷದಾಸರು**

.

**'ಸುಖವಾಗಲಿ ಬಹು ದುಃಖವಾಗಲಿ ಸಖ ನೀನಾಗಿರು ಪಾಂಡುರಂಗ'** ಎಂಬ ದಾಸವಾಣಿ ಇದೆ. ಆದರೆ ಸಾಮಾನ್ಯವಾಗಿ ಜೀವನದಲ್ಲಿ ಭಗವಂತನನ್ನು ಸ್ಮರಿಸುತಲಿದ್ದರೂ ಆನಂದ ಕ್ಲೇಶಗಳನ್ನು ಕಾಣುತ್ತಿರುವೆವು. ಭಗವಂತನ ಸಂಕಲ್ಪದಂತೆ ನಡೆಯುವುದೇ ನಿಶ್ಚಿತ. ಇದಕ್ಕೆ ನಮ್ಮ ಹಿಂದಿನ ಸುಕೃತ ದುಷ್ಕೃತ್ಯಗಳೇ ಕಾರಣ. ಅದಕ್ಕೆ ದಾಸರು ಅಂದು ಮಾಡಿದ ಕರ್ಮ ಎಂದದ್ದು. ಶ್ರೀ ಪುರಂದರರು

'**ಹರಿ ಚಿತ್ತ ಸತ್ಯ, ನರ ಚಿತ್ತಕ್ಕೆ ಬಂದದ್ದು ಲವಲೇಶ ನಡೆಯದು**' ಎಂದದ್ದು ಎಲ್ಲರ ಅನುಭವ ಅಲ್ಲವೇ ! ಶ್ರೀ ಜಗನ್ನಾಥ ದಾಸರು ಒಂದು ಕಡೆ -

**ಸತ್ಯ ಸಂಕಲ್ಪ ಸದಾ ಏನಿತ್ತುದೇ ಪುರು-**
**ಷಾರ್ಥವೆಂದರಿದತ್ಯಧಿಕ ಸಂತೋಷದಲಿ ನೆನೆವುತ್ತ ಭುಂಜಿಸುಪುದು ॥**

ಎಂದದ್ದನ್ನೂ ಸದಾ ಗಮನದಲ್ಲಿರಿಸಬೇಕು. ವಿಜಯದಾಸರು -

**ನಿನ್ನ ಚಿತ್ತಕ್ಕೆ ಬಂದುದನು ಮಾಡು ಸರ್ವೇಶ ।**
**ಎನ್ನ ಸ್ವಾತಂತ್ರ್ಯ ಲವಮಾತ್ರ ಉಂಟೇ ಸ್ವಾಮಿ ॥**

* * * * * *

**ಲೇಖಕರು:** Dr. A. B. ಶಾಮಾಚಾರ್, ಬೆಂಗಳೂರು. "**ಹರಿದಾಸ ಹೃದಯ"** ಗ್ರಂಥದಿಂದ. (ಲೇಖಕರ ಅನುಮಾನತಿಯೊಂದಿಗೆ).

**ಈ ಕೆಳಗಿನದು ಇನ್ನೊಂದು ಸಂಗ್ರಹದಿಂದ ಆಯ್ದದ್ದು:**

**ಹರಿ ಚಿತ್ತ ಸತ್ಯ ಹರಿ ಚಿತ್ತ**

**ನರ ಚಿತ್ತಕ್ಕ ಬಂದದ್ದು ಲವಲೇಶವೂ ನಡೆಯದು**

*ಅಶ್ವತ್ಥಾಮರು ರುದ್ರನ ಅವತಾರ*..

*ರುದ್ರ ಎಂದರೆ ಸರ್ವ ಸಂಹಾರಕ, ಲಯ ಕಾರಕ*..

ಅಂತಹ ರುದ್ರ ದೇವರಿಗು ಸಹ ಬ್ರಹ್ಮಾಸ್ತ್ರ ಪ್ರಯೋಗ ಮಾಡಿ ಉತ್ತರೆಯ ಗರ್ಭದಲ್ಲಿದ್ದ ಶಿಶುವನ್ನು ಸಂಹಾರ ಮಾಡಲು ಆಗಲಿಲ್ಲ..

*ಏಕೆಂದರೆ ಶ್ರೀ ಹರಿ ಪಾಂಡವರ ಸಂತತಿಯನ್ನು ರಕ್ಷಿಸಲು ಕಂಕಣ ಬದ್ದನಾಗಿದ್ದ*

ಅಂತಹವರೆ ಸೋತಾಗ ನಮ್ಮಂಥವರ, ಉಳಿದವರ ಪಾಡೇನು? ?

ಆದ್ದರಿಂದ *ಶ್ರೀ ಹರಿಯ ಸಂಕಲ್ಪದಂತೆ ಪ್ರತಿಯೊಂದು ನಡೆಯುವದು, ನಡೆಯುತ್ತದೆ* ಅನ್ನುವುದು

ನಮ್ಮ ಎಚ್ಚರಿಕೆಗೆ ಸದಾ ಇರಬೇಕು ..

🙏ಹರೇ ಶ್ರೀನಿವಾಸ🙏